ಬಿ) ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶದ ವ್ಯಾಪ್ತಿಯಲ್ಲಿ ಇಲಾಖೆಯಲ್ಲಿನ ಕಾರ್ಯನಿರ್ವಾಹಕ ಸಿಬ್ಬಂದಿಯೇ ಮನೆ ಮನೆ ಪರಿಶೀಲಿಸಿ ಸಂಶಯಾಸ್ಪದವಾದ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ನಕಲಿ ಎಂದು ಗುರುತಿಸಿ ರದ್ದುಪಡಿಸುವ ಕೆಲಸವನ್ನು ನಿರ್ವಹಿಸುತ್ತಿದ್ದಾರೆ.

ರಾಜ್ಯ ಕೇಂದ್ರ ಪುರಸ್ಕೃತ ಯೋಜನೆ

643 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಎ) ರಾಜ್ಯದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಎಷ್ಟು ಮೀನುಗಾರಿಕೆ ಬಂದರು ಮತ್ತು ಇಳಿದಾಣಗಳನ್ನು ನಿರ್ಮಿಸಲು ಯೋಜಿಸಲಾಗಿದೆ, ಎಷ್ಟು ಕೇಂದ್ರಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ?

ಬಿ) 1995-96ನೇ ಸಾಲಿನಲ್ಲಿ ಹೊಸದಾಗಿ ಎಷ್ಟು ಕೇಂದ್ರಗಳ ನಿರ್ಮಾಣಕ್ಕೆ ಯೋಜನಾ ವರದಿ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ,

ಸಿ) ಅವುಗಳು ಯಾವುವು, ವಿವರ ನೀಡುವುದು,

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಎ) ಎರಡು ಮೀನುಗಾರಿಕೆ ಬಂದರು ಅಂದರೆ

1) ಮಲ್ಪೆ ಬಂದರಿನ ಎರಡನೇ ಹಂತ ಮತ್ತು

2) ಮಂಗಳೂರು ಬಂದರಿನ ಧಕ್ಕೆ ವಿಸ್ತರಣೆ 8 ಇಳಿದಾಣಗಳು.

ಬಿ) ಇಲ್ಲ.

ಸಿ) ಉದ್ಭವಿಸುವುದಿಲ್ಲ.

ಹೊನ್ನಾವರ ಬಂದರಿನ ಶುಚಿತ್ವ.

644 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ರಾಜ್ಯದ ಹೊನ್ನಾವರ ಬಂದರಿನ ಶುಚಿತ್ವಕ್ಕೆ 13-9-1995ರಂದು ಟೆಂಡರ್ ಸ್ವೀಕರಿಸಲಾಗಿದೆಯೇ,

ಬಿ) ಸ್ವೀಕರಿಸಿದ್ದಲ್ಲಿ, ಮೀನುಗಾರಿಕೆ ವರ್ಷ ಮುಗಿಯುತ್ತಾ, ಬಂದಿದ್ದರೂ, ಟೆಂಡರ್ ಅನುಮೋದಿಸಿ ಸುಚಿತ್ವದ ಕೆಲಸವನ್ನು ವಹಿಸಿ ಕೊಡದಿರಲು ಕಾರಣವೇನು? (ವಿವರ ನೀಡುವುದು).